**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಕ್ರಿಮಿನಲ್ ಮಿಸ್ ನಂ.363/2020 ಆರ್.ಡಬ್ಲೂ: 01**

ಸಾಕ್ಷಿಯನ್ನು ಇಂದು ದಿನಾಂಕಃ **03.07.2024** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀ **ಕೆ.ಎಂ.ಯು** ವಕೀಲರಿಂದಃ

ನಾನು ದಿನಾಂಕ 19.10.2023 ರಂದು ನನ್ನ ಮುಖ್ಯ ವಿಚಾರಣೆಯ 2 ನೇ ಪುಟದ ಮೊದಲನೇ ಪ್ಯಾರದ ಕೊನೆಯ ಸಾಲುಗಳಲ್ಲಿ ನನ್ನ ಹೆಂಡತಿ ಪ್ರಸುತ್ತ ಶ್ರೀರಂಗಪಟ್ಟಣ ತಾಲ್ಲೂಕಿನ ಚಿನ್ನನಾಯಕನಹಳ್ಳಿ ಗ್ರಾಮದಲ್ಲಿರುವ ನಾಯರ ಪೆಟ್ರೋಲ್ ಬಂಕ್ ನಲ್ಲಿ ಕ್ಯಾಸರ್ ಆಗಿ ಕೆಲಸ ಮಾಡುತ್ತಿರುತ್ತಾರೆ ಮತ್ತು ಸದರಿಯವರಿಗೆ ರೂ.15,000/- ಮಾಸಿಕ ವರಮಾನ ಇರುತ್ತದೆ" ಎಂದು ನಾನು ಸಾಕ್ಷಿ ನುಡಿದಿರುತ್ತೇನೆ ಆದರೆ clerical ದೋಷದಿಂದ ಅಥವಾ ಟೈಪಿಂಗ್ ದೋಷದಿಂದ ''ನಾನು ಪ್ರಸ್ತುತ ಶ್ರೀರಂಗಪಟ್ಟಣ ತಾಲ್ಲೂಕಿನ ಚಿನ್ನನಾಯಕನಹಳ್ಳಿ ಗ್ರಾಮದಲ್ಲಿರುವ ನಾಯರ ಪೆಟ್ರೋಲ್ ಬಂಕ್ ನಲ್ಲಿ ಕ್ಯಾಸರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನಗೆ ರೂ.15,000/- ಮಾಸಿಕ ವರಮಾನ ಇರುತ್ತದೆ" ಎಂದು ತಪ್ಪಾಗಿ ನಮೂದಾಗಿರುತ್ತದೆ. ಆದ್ದರಿಂದ ನಾನು ಆ ರೀತಿ ಯಾವುದೇ ಕೆಲಸ ಮಾಡುತ್ತಿರುವುದಿಲ್ಲ, ಸದರಿ ಪೆಟ್ರೋಲ್ ಬಂಕ್ ನಲ್ಲಿ ನನ್ನ ಹೆಂಡತಿ ಕೆಲಸ ಮಾಡುತ್ತಿರುತ್ತಾರೆ. ಆದ್ದರಿಂದ ಸದರಿ ನನ್ನ ಮುಖ್ಯ ವಿಚಾರಣೆಯಲ್ಲಿರುವ ದೋಷವನ್ನು ಸರಿಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ **ಬಿ.ಎಲ್.ಜಿ** ವಕೀಲರಿಂದಃ

ಈಗ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನನ್ನ ಹೆಂಡತಿ ಸದರಿ ಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ಸಾಕ್ಷಿ ಆಧಾರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಭಾವಚಿತ್ರವನ್ನು ಕೊಟ್ಟಿರುತ್ತೇನೆ. ಸದರಿ ಭಾವಚಿತ್ರ ನ್ಯಾಯಾಲಯದ ಕಡತಗಳಲ್ಲಿ ಇರುವುದಿಲ್ಲ ಎಂದರೆ ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ನನ್ನ ಹೆಂಡತಿ ಸದರಿ ಪೆಟ್ರೋಲ್ ಬಂಕ್ ನಲ್ಲಿಕೆಲಸ ಮಾಡುತ್ತಿರುವ ಬಗ್ಗೆ ಆಕೆಯ ವೇತನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಸದರಿ ಅರ್ಜಿದಾರರು ನಾನು

ಹೇಳಿದಂತೆ ಯಾವುದೇ ಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ.

ನಾನು ಪಿಯುಸಿವರೆಗೂ ವ್ಯಾಸಂಗ ಮಾಡಿರುತ್ತೇನೆ. ನಾನು ಈಗ ಪ್ರಸ್ತುತವಾಗಿ ಪಾಂಡವಪುರ ರೇಲ್ವೆ ನಿಲ್ದಾಣ ಹತ್ತಿರ ಇರುವ ನನ್ನ ತಮ್ಮನ ಮನೆಯಲ್ಲಿ ವಾಸ ಇರುತ್ತೇನೆ. ನಾನು ನನ್ನ ಮದುವೆಯ ಸಮಯದಲ್ಲಿ ಅರ್ಜಿದಾರರ ಪೋಷಕರು ನನಗೆ ರೂ.1,00,000/- ನಗದು ಹಣ ಹಾಗೂ 100 ಗ್ರಾಂ ಚಿನ್ನವನ್ನು ವರದಕ್ಷಿಣೆಯಾಗಿ ಕೊಟ್ಟು ಮದುವೆಯ ಖರ್ಚು ಸುಮಾರು ರೂ.4,00,000 ದಷ್ಟು ಭರಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮದುವೆ ಭಾರತಿ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ ಎಂದರೆ ಸರಿ.

ನಾನು ಮದುವೆಯಾದ ನಂತರ ಹೆಚ್ಚಿನ ವರದಕ್ಷಿಣೆ ತರುವಂತೆ ನಾನು ಅರ್ಜಿದಾರರಿಗೆ ಕಿರುಕುಳ ಕ್ರೌರ್ಯ ಮತ್ತು ಹಿಂಸೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕ್ರೌರ್ಯದ ಬಗ್ಗೆ ಅರ್ಜಿದಾರರು ನನ್ನ ಮೇಲೆ ದಿನಾಂಕ 06.10.2017 ರಂದು ಪಾಂಡವಪುರ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದೂರಿನ ಆಧಾರದ ಮೇಲೆ ನ್ಯಾಯ ಪಂಚಾಯತಿ ಮಾಡಿ ನನಗೆ ಬುದ್ದಿವಾದ ಹೇಳಿ ಸುಗಮವಾಗಿ ವೈವಾಹಿಕ ಜೀವನವನ್ನು ನಡೆಸುವಂತೆ ಹೇಳಿರುತ್ತಾರೆ ಎಂದರೆ ಸರಿಯಲ್ಲ.ಪಂಚರು ನನಗೆ ಬುದ್ಧಿವಾದ ಹೇಳಿದ್ದರೂ ಸಹ ನಾನು ತಿದ್ದುಕೊಳ್ಳದೇ ಅದೇ ರೀತಿ ಅರ್ಜಿದಾರರಿಗೆ ಕ್ರೌರ್ಯ ಹಿಂಸೆಗಳನ್ನು ಮುಂದುವರೆಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ದಿನಾಂಕ 21.07.2019 ರಂದು ನನ್ನ ಕಿರುಕುಳ ಮತ್ತು ಹಿಂಸೆ ತಾಳಲಾರದೇ ಅರ್ಜಿದಾರರು ಪುನಃ ಪಾಂಡವಪುರ ಪೋಲಿಸ ಠಾಣೆಯಲ್ಲಿ ನನ್ನ ಮೇಲೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಒಳ್ಳೆಯ ಗಂಡನಲ್ಲ ಮತ್ತು ನನ್ನ ಮಗಳಿಗೆ ಒಳ್ಳೆಯ ತಂದೆಯಲ್ಲ ಮತ್ತು ನಾನು ಸದರಿಯವರನ್ನು ಸರಿಯಾಗಿ ನೋಡಿಕೊಳ್ಳದೇ ನಿರ್ಲಕ್ಷಿಸಿರುತ್ತೇನ ಎಂದರೆ ಸರಿಯಲ್ಲ.

ನನಗೆ ಇಬ್ಬರು ಸಹೋದರ ಮತ್ತು ಇಬ್ಬರು ಸಹೋದರಿಯರು ಇರುತ್ತಾರೆ. ನನ್ನ ಸಹೋದರರ ಪೈಕಿ ಸುದೀಂದ್ರರವರು ನನ್ನ ತಂದೆಯನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ

ಸರಿ. ನನ್ನ ತಾಯಿ ಬದುಕಿದ್ದಾಗ ಸದರಿ 1 ನೇ ಅರ್ಜಿದಾರರು ನನ್ನ ತಾಯಿಯನ್ನು ಮತ್ತು ನನ್ನ ತಂದೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಹೆಂಡತಿ ನನ್ನ ತಂದೆ-ತಾಯಿಯವರನ್ನು ನೋಡಿಕೊಳ್ಳದೇ ಅವರೊಂದಿಗೆ ವಾದ ಮಾಡಿ ಜಗಳ ಮಾಡುತ್ತಿದುದ್ದರಿಂದ ನಾನು ಮತ್ತು 1 ನೇ ಅರ್ಜಿದಾರರು ಸದರಿ ವೈವಾಹಿಕ ಜೀವನದ ಮನೆಯನ್ನು ಬಿಟ್ಟು ಬೇರೆ ಬಾಡಿಗೆ ಮನೆಗೆ ನಾವಿಬ್ಬರೂ ಹೋಗಿರುತ್ತೇವೆ. ಸದರಿ ಬಾಡಿಗೆ ಮನೆಯಲ್ಲಿ ನಾವು ವಾಸ ಇದ್ದ ಬಗ್ಗೆ ಯಾವುದಾದರೂ ದಾಖಲೆ ಇದೆಯಾ ಎಂದರೆ ಇಲ್ಲ. ಸಾಕ್ಷಿ ಮುಂದುವರೆದು ಬಾಡಿಗೆ ಕರಾರು ಪತ್ರ ಮತ್ತು ಇತರೆ ದಾಖಲೆಗಳನ್ನು ಅರ್ಜಿದಾರರೇ ತೆಗೆದುಕೊಂಡು ಹೋಗಿರುತ್ತಾರೆ ಎನ್ನುವರು. ನಾನು ಹೇಳಿದಂತೆ 1 ನೇ ಅರ್ಜಿದಾರರಿಗೆ ನಾನು ಯಾವುದೇ ಬಾಡಿಗೆ ಮನೆಯನ್ನು ಮಾಡಿರುವುದಿಲ್ಲ, ನನ್ನ ಹೆಂಡತಿ ನನ್ನ ತಂದೆ-ತಾಯಿಯವರೊಂದಿಗೆ ಅನ್ಯೋನ್ಯವಾಗಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. 2 ನೇ ಅರ್ಜಿದಾರರ ವಿಧ್ಯಾಭ್ಯಾಸದ ಖರ್ಚು ವೆಚ್ಚಗಳನ್ನು 1 ನೇ ಅರ್ಜಿದಾರರು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ಸದರಿ 2 ನೇ ಅರ್ಜಿದಾರರ ವಾರ್ಷಿಕ ಶಾಲಾ ಶುಲ್ಕ ರೂ,40,000/- ಹಣವನ್ನು 1 ನೇ ಅರ್ಜಿದಾರರೇ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮದುವೆಯಾದ 2 ವರ್ಷಗಳ ನಂತರ ನನ್ನ ಹೆಂಡತಿಗೆ ಕಿರುಕುಳ, ಹಿಂಸೆ ಕೊಡಲು ಪ್ರಾರಂಭಿಸಿರುತ್ತೇನೆ ಎಂದರೆ ಸರಿಯಲ್ಲ. ಈಗ ಪ್ರಸ್ತುತವಾಗಿ 1 ಮತ್ತು 2 ನೇ ಅರ್ಜಿದಾರರು ಬೇರೆ ಬಾಡಿಗೆ ಮನೆಯಲ್ಲಿ ಜೀವನ ನಡೆಸುತ್ತಿದ್ದು, ತಿಂಗಳಿಗೆ ರೂ.6,000/- ಬಾಡಿಗೆ ಕಟ್ಟುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸದರಿ ಅರ್ಜಿದಾರರು ಅವರ ತವರು ಮನೆಯಲ್ಲಿ ವಾಸ ಇರುತ್ತಾರೆ ಎನ್ನುವರು.

2 ನೇ ಅರ್ಜಿದಾರರು ನನ್ನ ತಂದೆ, ನನ್ನ ಒಡಹುಟ್ಟಿದವರು ಮತ್ತು ನನ್ನ ಮೇಲೆ ಪಾಲು ವಿಭಾಗಕ್ಕೆ ಶ್ರೀರಂಗಪಟ್ಟಣ ನ್ಯಾಯಾಲಯದಲ್ಲಿ O.S No.287/2020 ರಂತೆ ಸಿವಿಲ್ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿ. ಸದರಿ ಸಿವಿಲ್ ದಾವೆಯಲ್ಲಿ ನಾನು ವಕೀಲರನ್ನು ನೇಮಕ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಕೆನ್ನಾಳು ಗ್ರಾಮದಲ್ಲಿ ನನ್ನ

ತಂದೆ ವಾಸ ಇರುವ ಮನೆಗೆ ಹೊಂದಿಕೊಂಡಂತೆ ಎರಡು ಅಂಗಡಿ ಮಳಿಗೆಗಳು ಇವೆ ಎಂದರೆ ಸರಿ. ಸದರಿ ಅಂಗಡಿ ಮಳಿಗೆಗಳಿಗೆ ತಲಾ ರೂ.10,000/- ರಂತೆ ಮಾಸಿಕ ಬಾಡಿಗೆ ಬರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಮಳಿಗೆಗೆ ತಲಾ ರೂ.1,00,000/- ರಂತೆ ಮುಂಗಡ ಹಣ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ತಂದೆ ಜೊತೆ ಚೆನ್ನಾಗಿ ಇದ್ದು, ಆಗಾಗ ಅವರ ಮನೆಗೆ ಹೋಗಿ ಬಂದು ಮಾಡುತ್ತೇನೆ ಎಂದರೆ ಸರಿ. ಕಡತನಾಳು ಗ್ರಾಮದಲ್ಲಿ ನನ್ನ ತಂದೆ ಹೆಸರಿಗೆ 22 ಗುಂಟೆ ಜಮೀನು ರಸ್ತೆಗೆ ಹೊಂದಿಕೊಂಡು ಇದ್ದು, ಹೆಚ್ಚು ಬೆಲೆ ಬಾಳುವ ಜಮೀನು ಎಂದರೆ ಸರಿ. 1 ನೇ ಅರ್ಜಿದಾರರು ಯಾವುತ್ತಿಗೂ ನನ್ನ ಪೋಷಕರೊಂದಿಗೆ ಹಾಗೂ ನನ್ನೊಂದಿಗೆ ಜಗಳವಾಡಿರುವುದಿಲ್ಲ ಮತ್ತು ನಮಗೆ ಯಾವುದೇ ತರಹದ ಕಿರುಕುಳ ಅಥವಾ ಹಿಂಸೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿ ನಮಗೆ ಆ ರೀತಿ ಕಿರುಕುಳ, ಹಿಂಸೆ ಕೊಟ್ಟಿರುವುದಕ್ಕೆ ನಾನು ಠಾಣೆಯಲ್ಲಿ ದೂರನ್ನು ನೀಡಿರುವುದಿಲ್ಲ.

2 ನೇ ಅರ್ಜಿದಾರರು ಶಾಲಾ ಶುಲ್ಕ ವಾರ್ಷಿಕವಾಗಿ ರೂ.40,000/-ಮತ್ತು ಇತರೆ ಖರ್ಚು ವೆಚ್ಚಕ್ಕಾಗಿ ಮಾಸಿಕವಾಗಿ ಸುಮಾರು ರೂ.10,000/- ಬೇಕಾಗುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಅರ್ಜಿದಾರರಿಗೆ ಅವರ ಬಾಡಿಗೆಮನೆಯ ಹಣ ಕಟ್ಟಲು ತಿಂಗಳಿಗೆ ರೂ.6,000/-ರಂತೆ ಮತ್ತು ಅವರ ಖರ್ಚು ವೆಚ್ಚಕ್ಕಾಗಿ ತಿಂಗಳಿಗೆ ರೂ.15,000/- ಬೇಕಾಗುತ್ತದೆ ಎಂದರೆ ಸರಿಯಲ್ಲ.

ನಾನು ನನ್ನ ಸಹೋದರನ ಮನೆಯಲ್ಲಿ ವಾಸ ಇರುವುದಿಲ್ಲ, ಅರಳಹಳ್ಳಿಯಲ್ಲಿ ವಾಸ ಇರುತ್ತೇನೆ ಎಂದರೆ ಸರಿಯಲ್ಲ. ನನ್ನ ಮದುವೆಯನ್ನು 1 ನೇ ಅರ್ಜಿದಾರರ ಪೋಷಕರು ಅದ್ದೂರಿಯಾಗಿ ಸಾಕಷ್ಟು ಖರ್ಚು ಭರಿಸಿ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಸಣ್ಣಪುಟ್ಟ ವಿಚಾರಕ್ಕೆ ಯಾವತ್ತಿಗೂ ಜಗಳವನ್ನು ನಮ್ಮೊಂದಿಗೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಕೆಲಸ ಮಾಡುತ್ತಿದ್ದ ಜೆ.ಕೆ ಪ್ಯಾಕ್ಟರಿಯಲ್ಲಿ ನನ್ನನ್ನು ಕೆಲಸದಿಂದ ತೆಗೆದು ಹಾಕಿರುವ ಬಗ್ಗೆ ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಸದರಿ ಪ್ಯಾಕ್ಟರಿಯಲ್ಲಿ ನಾನು ಸುಮಾರು 10 ವರ್ಷಗಳ ಕಾಲ ಕೆಲಸ ಮಾಡಿರುತ್ತೇನೆ. ಆ ಸಮಯದಲ್ಲಿ ಸಂಬಳ ನನ್ನ ಬ್ಯಾಂಕ್ ಅಂಕೌಟಿಗೆ ಜಮಾ ಆಗುತ್ತಿತ್ತು. ನನ್ನ ಬ್ಯಾಂಕ ಖಾತೆಯ ಪಾಸಬುಕ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ನನಗೆ 2018 ರಲ್ಲಿ ಪಾರ್ಶ್ವವಾಯು ಆಗಿರುತ್ತದೆ. ಸದರಿ ಅನಾರೋಗ್ಯದಿಂದ ನಾನು ಕೆಲಸ ಬಿಟ್ಟು ಸುಮಾರು 5 ವರ್ಷ ಆಗಿರುತ್ತದೆ. ನಾನು ಈಗ ಪಾಂಡವಪುರ ರೇಲ್ವೆ ನಿಲ್ದಾಣದಲ್ಲಿ ಒಂದು ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಂಗಡಿಯ ವ್ಯಾಪಾರದಿಂದ ನನಗೆ ದಿನಕ್ಕೆ ರೂ.4,000 ರಿಂದ 5,000 ವ್ಯಾಪಾರ ಆಗುತ್ತದೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ತಂದೆ ಹೆಸರಿಗೆ ಜಮೀನುಗಳ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಜಮೀನು ಚಿನ್ನನಾಯಕನಹಳ್ಳಿಯಲ್ಲಿ ಇದೆ. ಸದರಿ ಜಮೀನು ಯಾವುದೂ ಇರುವುದಿಲ್ಲ ಮತ್ತು ಅದರ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಜೀವನಾಂಶವನ್ನು ಕೊಡಲು ತಪ್ಪಸಿಕೊಳ್ಳಲು ಈಗಲೂ ಅಂಗಡಿಯಲ್ಲಿ ವ್ಯಾಪಾರ ಮಾಡಿಕೊಂಡು ವ್ಯವಹಾರ ಮಾಡುತ್ತಿದ್ದರೂ ಸಹ ನನಗೆ ಪಾರ್ಶ್ವವಾಯು ಬಂದು stroke ಆಗಿದೆ ಎಂದು ವೈದ್ಯಕೀಯ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿ ನುಡಿಯಲು ನಾನು ನನ್ನ ಊರಿನಿಂದ ಒಬ್ಬನೇ ಬಂದಿರುತ್ತೇನೆ. ಈಗ ನನಗೆ ಓಡಾಡಲು ತೊಂದರೆ ಇರುವುದಿಲ್ಲ. ಅರ್ಜಿದಾರರಿಗೆ ಜೀವನಾಂಶವನ್ನು ಕೊಡಬಾರದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನಗೆ ಸದರಿ ಕಾಯಿಲೆ ಬಂದಿದ್ದರಿಂದ ನನಗೆ ನಿಶಕ್ತಿ ಆಗಿದ್ದು ಯಾವುದೇ ಕೆಲಸ ಮಾಡಲು ಆಗುವುದಿಲ್ಲ ಮತ್ತು ಸದರಿ ಕಾಯಿಲೆಗೆ ಈಗಲೂ ಸಹ ನಾನು ಉಪಚರಿಸಿಕೊಳ್ಳುತ್ತಿದ್ದೇನೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ 2 ನೇ ಅರ್ಜಿದಾರರ ಶಾಲಾ ಶುಲ್ಕದ ರಸೀದಿಗಳನ್ನು ತೋರಿಸಿದ್ದು ಅದನ್ನು ನೋಡಿ ಶಾಲಾ ಶುಲ್ಕದ ರಸೀದಿ ಎಂದು ಹೇಳುತ್ತಾರೆ. ಸದರಿ ರಸೀದಿಯಲ್ಲಿ ಶಾಲಾ ಮೊಹರು ಇಲ್ಲದೇ ಇರುವುದರಿಂದ ಸದರಿ ರಸೀದಿಯನ್ನು ಗುರುತಿಸಲು ತಕರಾರು ಇದೆ ಎಂದು ಹೇಳುತ್ತಾರೆ.

ನಾನು ಅರ್ಜಿದಾರರಿಗೆ ಜೀವನಾಂಶ ಕೊಡಲು ಬಾದ್ಯಸ್ಥನು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**

**Crl.Mis No.363/2020**

Petitioner and respondent present.

Counsel for both parties present.

For further chief of RW.1, RW.1 present and further examined and cross examined by counsel for petitioner.

For further chief of RW.1, counsel for respondent prays time.

Call on 24.07.2024.

**Civil Judge and JMFC.,**
**T.Narasipura.**